ಶ್ರೀ ಸಿ. ವಿ. ವೆಂಕಟರಾಯಪ್ಪ.—ಕೋಲಾರದ ಬ್ಯಾಂಕಿನವರು 6 ಲಕ್ಷ ಕೇಳಿದರೆ ಏನೂ ಕೊಡದಿರಲು ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—1962-63ನೆಯ ಸಾಲಿನಲ್ಲಿ 2 ಲಕ್ಷ ಕೊಡಬಹುದೆಂದು ಶಿಫಾರ್ಸು ಮಾಡಿತ್ತು, ಕೊಡಲಿಲ್ಲ.

ಶ್ರೀ ಜಿ. ರಾಮೇಗೌಡ.—ನಮ್ಮ ಸರ್ಕಾರವೇ ಹಣ ತರಿಸಿಕೊಂಡು ಹಂಚಲು ಸಾಧ್ಯವಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರ ಬ್ಯಾಂಕಿಗೆ ಕೊಡಬೇಕಾದ ಹಣವನ್ನು ಸಕಾಲದಲ್ಲಿ ಪಾವತಿ ಮಾಡದಿರುವುದರಿಂದ ತಾನೇ ಡಿಸ್ಟ್ರಿಕ್ಟ್ ಬ್ಯಾಂಕುಗಳಿಗೆ ಸಕಾಲದಲ್ಲಿ ಹಣದೊರಕದಿರುವುದು ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಆಗಲೆ ಹೇಳಿದ್ದೇನೆ.

ಶ್ರೀ ಜಿ. ವಿ. ಗೌಡ.—ಡಿಸ್ಟ್ರಿಕ್ಟ್‌ನವರು ಕೇಳಿದ ಮೇಲೆ ಸರ್ಕಾರ ಶಿಫಾರ್ಸು ಮಾಡುವುದೆ ?

ಶ್ರೀ ರಾಮಕೃಷ್ಣ ಹೆಗಡೆ.—ಹೌದು.

Auditing of the Accounts of the Mysore State Cotton Weavers' Apex Bank for the year 1962-63.

*Q.—526. **Sri H. D. DEVE GOWDA** (Holenarasipur).—

Will the Government be pleased to state :—

(*a*) whether the accounts of the Mysore State Cotton Weavers' Apex Bank for the year 1962–63 have been audited ;

(*b*) whether it is a fact that the above Apex Bank which has purchased goods from the Primary Weavers' Co-operative Societies in the State, has failed to credit the amount to the account of such Societies thereby causing inconvenience to them ;

(*c*) whether it is a fact that the State Apex Cotton Weavers' Bank is not paying rebate on yarn to Primary Weavers' Co-operative Societies in the State ;

(*d*) whether they would take steps early to see that the accounts of the said Apex Bank are maintained properly ?

A.—**Sri K. MALLAPPA** (Minister for Industries and Commerce).—

(*a*) There is no Apex Bank under the name and style of "Mysore State Cotton Weavers' Apex Bank". But, there is an Apex Society by name "the Mysore State Cotton Handloom Weavers' Co-operative Society, Ltd., Bangalore."

The accounts of the Mysore State Cotton Handloom Weavers' Co-operative Society Ltd., Bangalore, for the year 1962–63, would be audited after the close of the Co-operative year 1962–63 (*i.e.*, by the end of June 1963).

(*b*) No, the Society has been crediting the amounts due, to the accounts of the concerned Primary Societies after observing the usual formalities.

(*c*) No rebate is admissible on purchases of yarn.

(*d*) Steps would be taken for the proper maintenance of accounts of the Society in case the audit of its accounts discloses any irregularity.

ಶ್ರೀ ಎಚ್. ಡಿ. ದೇವೇಗೌಡ.—1962-63ರ ಲೆಕ್ಕಗಳು ಆಡಿಟ್ ಆಗಿಲ್ಲವಿರುವಾಗ ಅದರ ಹಿಂದಿನ ಸಾಲಿನ ವರದಿಗಳು ಸಮರ್ಪಕವಾಗಿರುತ್ತವೆಯೇ ?

†ಶ್ರೀ ಕೆ. ಮಲ್ಲಪ್ಪ.—1961-62ರ ವರದಿ ಸಮರ್ಪಕವಾಗಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅದರ ಬಗ್ಗೆ ಏನು ಕಾರ್ಯಕ್ರಮ ಕೈಕೊಳ್ಳಲಾಗಿದೆ ?

ಶ್ರೀ ಕೆ. ಮಲ್ಲಪ್ಪ.—ಷಾರ್ಜೀಸ್ ಬಂದಿದೆ, ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದೆ.

ಶ್ರೀ ಎಸ್. ಎಂ. ಕೃಷ್ಣ.—1959-60ರ ಲೆಕ್ಕ ತೃಪ್ತಿಕರವಾಗಿದೆಯೆ ?

ಶ್ರೀ ಕೆ. ಮಲ್ಲಪ್ಪ.—ಅದೂ ಕೂಡ ಸರಿಯಾಗಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಹಾಗಾದರೆ ಕಳೆದ ಎರಡು ವರ್ಷಗಳಿಂದ ಏನು ಮಾಡುತ್ತಿದ್ದಿರಿ ?

ಶ್ರೀ ಕೆ. ಮಲ್ಲಪ್ಪ.—ಈಗ ಸರ್ಕಾರಕ್ಕೆ ತಿಳಿಸಿದ್ದಾರೆ. ಯಾರ ಮೇಲೆ ಲಯಬಿಲಿಟಿ ಫಿಕ್ಸ್ ಮಾಡಬೇಕೆಂಬುದನ್ನು ನಿರ್ಧರಿಸಬೇಕಾಗಿದೆ. ಕೆಲವು ಸಿವಿಲ್ ಲಯಬಿಲಿಟಿ ಮೇಲೆ ಕ್ರಮ ತೆಗೆದುಕೊಂಡಿದ್ದಾಗಿದೆ. ಕ್ರಿಮಿನಲ್ ಲಯಬಿಲಿಟಿ ಇರುವವರ ಮೇಲೆ ಕ್ರಮ ಜರುಗುತ್ತಾ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ರಿಬೇಟ್ ಏಕೆ ಕೊಡುತ್ತಿಲ್ಲ ?

ಶ್ರೀ ಕೆ. ಮಲ್ಲಪ್ಪ.—ಕೆಲವು ಲಯೆಬಿಲಿಟೀಸ್ ಇರಬೇಕು. ಲೆಕ್ಕಾಚಾರಮಾಡಿ ಕೊಡ ಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಬರಬೇಕಾದ ಹಣ ಜಮಾ ಮಾಡದಿರುವುದರಿಂದ ಪ್ರಾಥಮಿಕ ಸಹಕಾರ ಸಂಘಗಳು ಕೆಲಸ ಮಾಡಲು ತೊಂದರೆಯಾಗಿರುವುದು ಗೊತ್ತೆ ?

ಶ್ರೀ ಕೆ. ಮಲ್ಲಪ್ಪ.—ರಿಬೇಟ್ ಕೊಡಬೇಕಾದ್ದನ್ನು ಅವರ ಲೆಕ್ಕಕ್ಕೆ ಜಮಾ ಮಾಡಲಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸೊಸೈಟಿಗಳಲ್ಲಿ ಲೋಪದೋಷಗಳಿದ್ದರೆ ಮೇಲಧಿಕಾರಿಗಳು ಮುಚ್ಚಿಡುವುದು ಸರಿಯೆ ?

ಶ್ರೀ ಕೆ. ಮಲ್ಲಪ್ಪ.—ಮುಚ್ಚಿಡುವುದಲ್ಲ ಅದು. ಅದು ಅಧಿಕಾರಿಗಳ ಲೋಪವಲ್ಲ. ಸೊಸೈಟಿ ಕೆಲಸ ಮಾಡುವಾಗ ಸ್ವಲ್ಪ ಲೋಪದೋಷ ಕಂಡು ಬಂದರೆ ಆಡಿಟ್ ಮಾಡಿದಾಗ ನೋಡಿ ಕಾನೂನು ರೀತ್ಯ ಸಂಬಂಧಪಟ್ಟ ಅಧಿಕಾರಿಗಳು ಅಥವಾ ರಿಜಿಸ್ಟ್ರಾರರು ಕ್ರಮ ಜರುಗಿಸುತ್ತಾರೆ. ಬೇರೆಯವರು ಆ ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—1962-63ನೆಯ ಸಾಲಿನ ಲೆಕ್ಕ ಯಾವ ಸ್ಟೇಜಿನಲ್ಲಿದೆ ?

ಶ್ರೀ ಕೆ. ಮಲ್ಲಪ್ಪ.—ಲೆಕ್ಕವನ್ನು ಪೂರ್ಣಮಾಡಲು ಸ್ವಲ್ಪ ನಿಧಾನವಾಗುತ್ತದೆ. ಆದಾದ ಮೇಲೆ ಆಡಿಟ್ ಮಾಡುತ್ತಾರೆ.

12-30 P.M.

ಶ್ರೀ ಸಿದ್ಧಯ್ಯ ಕಾಶೀಮಠ.—ಸಂಘದ ಛೇರ್ಮನ್ ಯಾರು ಮತ್ತು ಎಷ್ಟು ದಿವಸಗಳಿಂದ ಅವರು ಛೇರ್ಮನ್ ಆಗಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಶ್ರೀ ಭಾರದ್ವಾಜ ಎಂಬವರು ಚೇರ್ಮನ್ ಆಗಿದ್ದಾರೆ. ಅವರು ನಾನು ಬಂದಾಗಿನಿಂದ ಇದ್ದಾರೆ.

ಶ್ರೀ ಎಂ. ಎರ್. ಪಾಟೀಲ್.—ಕಂಡುಬಂದಂಥ ಲೋಪದೋಷಗಳನ್ನು ಸರಿಪಡಿಸಲು ಮತ್ತು ಅಪವ್ಯಯ ಪುನರಾವರ್ತಿಯಾಗದಂತೆ ಸರ್ಕಾರದವರು ಯಾವುದಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ? ತೆಗೆದುಕೊಂಡಿದ್ದರೆ ಯಾವ ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಈಗ ವಿಚಾರಮಾಡಿ ಯಾರ್ಯಾರಿಂದ ನಷ್ಟ ಭರ್ತಿಯಾಗಬೇಕಾಗಿದೆ ಎಂಬ ಬಗ್ಗೆ ಅಕೌಂಟು ತಯಾರುಮಾಡಲಾಗುತ್ತಿದೆ. ಇನ್ನು ಮುಂದೆ ಸೊಸೈಟಿ ಪುನರ್ರಚನೆ ಮಾಡಬೇಕು ಮತ್ತು ಸೊಸೈಟಿ ಅಂಗಗಳಾಗಿರತಕ್ಕಂಥ ಪ್ರಾಥಮಿಕ ಸಂಘಗಳನ್ನು ರಚನೆಮಾಡಬೇಕು ; ಪುನರ್ರಚನೆ ಮಾಡಲು ಆರೋಚನೆ ಮಾಡುತ್ತಾ ಇದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಂಘದ ಕಾರ್ಯದರ್ಶಿಯವರು ಡೆಪ್ಯುಟಿ ರಿಜಿಸ್ಟ್ರಾರ ಕೇಡಿನವರು ಎಂದು ಗೊತ್ತಿದೆಯೆ ? ಡೆಪ್ಯುಟಿ ರಿಜಿಸ್ಟ್ರಾರ್ ಆಗಿರತಕ್ಕಂಥವರನ್ನು ಕಾರ್ಯದರ್ಶಿ ಯಾಗಿಟ್ಟು ಅಲ್ಲಿ ಆಡಳಿತ ಇಷ್ಟು ಕೆಟ್ಟಿರುವುದಕ್ಕೆ ಕಾರಣವೇನು ? ಆ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರ ?

ಶ್ರೀ ಕೆ. ಮಲ್ಲಪ್ಪ.—40 ಎಂಪ್ಲೋರಿಯಮ್ ಶಾಖೆಗಳಿವೆ. ಈ 40 ಶಾಖೆಗಳಿಗೆ ಕಳುಹಿಸಿ ಕೊಟ್ಟಂಥ ಮಾಲು ಶಾಖೆಗಳ ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆಯೇ ಎಂದು ನೋಡಿ ಷಾರ್ಟೇಜಿಗೆ ಜವಾಬ್ದಾರಿ ಫಿಕ್ಸ್ ಮಾಡಬೇಕು. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕು.

ಶ್ರೀ ಎಸ್. ಎ. ರಾಮೇ ಗೌಡ.—ಈಗ ಸರಕಾರದವರು ವಿಧಿಸಿರತಕ್ಕಂಥ ರಿಬೇಟಿನ ವಿಚಾರದಲ್ಲಿ ಅನೇಕ ಕಡೆಯಿಂದ ಲೋಪದೋಷಗಳು ಬರುತ್ತಾ ಇರುವುದರಿಂದ ಇದನ್ನು ವಜಾ ಮಾಡಬೇಕೆಂದು ಸಲಹೆ ಬಂದಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಮಲ್ಲಪ್ಪ.—ಕೆಲವರು ಹೇಳುತ್ತಾ ಇದ್ದಾರೆ, ರಿಬೇಟು ಪದ್ಧತಿ ಸರಿಯಾಗಿ ನಡೆಯುತ್ತಿಲ್ಲವೆಂದು. ಕೆಲವು ಕಡೆ ದುರುಪಯೋಗವಾಗಿರುವ ದೂರು ಬಂದಿದೆ. ಕೆಲವುಕಡೆ ನದುಪಯೋಗವೂ ಆಗಿದೆ. ದುರುಪಯೋಗ ತಪ್ಪಿಸಬೇಕೆಂದೂ ಸಲಹೆ ಬಂದಿದೆ, ರಿಬೇಟಿ ವಜಾ ಮಾಡಬೇಕೆಂದೂ ಸಲಹೆ ಬಂದಿದೆ. ಸರಕಾರ ಏನೂ ತೀರ್ಮಾನ ಮಾಡಿಲ್ಲ.

ಶ್ರೀ ಕೆ. ಎಸ್. ರಂಗನಾಥ.—1959-60, 1960-61ನೆಯ ಸಾಲಿನಲ್ಲಿ ಎಷ್ಟು ನಷ್ಟ ವಾಗಿದೆ ?

ಶ್ರೀ ಕೆ. ಮಲ್ಲಪ್ಪ.—ಸಾಧಾರಣವಾಗಿ 1961-62ರ ಅಖ್ಯೆರಿಗೆ 68 ಸಾವಿರ ರೂಪಾಯಿ ಚಿಲ್ಲರೆ ನಷ್ಟ ಬಂದಿರುವ ಹಾಗೆ ಕಾಣುತ್ತದೆ.

Sri V. S. PATIL.—Is it a fact that there are societies only for getting this rebate without doing any business ?

Sri K. MALLAPPA.—I do not think societies will come into existence only to draw rebate, but there are some societies which have been abusing the concession.

ಶ್ರೀ ಜಿ. ರಾಮೇ ಗೌಡ.—ಈ ಸ್ಟೇಟ್ ಜೂರಿಸ್ಡಿಕ್ಷನ್ ಇರತಕ್ಕಂಥ ಸಹಕಾರ ಸಂಘಗಳ ಲೆಕ್ಕವನ್ನು ವರ್ಷ ಮುಗಿದ ಮೇಲೆ ಮತ್ತು 6 ತಿಂಗಳಿಗೊಮ್ಮೆ ಆಡಿಟ್ ಮಾಡುವುದಿಲ್ಲವೆ ?

ಶ್ರೀ ಕೆ. ಮಲ್ಲಪ್ಪ.—ಎರಡು ಆಡಿಟ್ ಇದೆ: ಒಂದು ಇಂಟರ್ನಲ್ ಆಡಿಟ್—ಕಂಟಿನುಯಸ್ಸಾಗಿ ಪ್ರತಿ ನಿತ್ಯವೂ ಮಾಡತಕ್ಕಂಥಾದ್ದು. ವಾರ್ಷಿಕ ಆಡಿಟ್ಟಿನ ಅವಶ್ಯಕತೆಯೂ ಇದೆ.

Grant of Gomal Land in Gerahalli, Magadi Taluk.

* *Q.*—532. **Sri C. R. RANGE GOWDA** (Magadi).—

Will the Government be pleased to state :—

(*a*) what is the extent of gomal land available in Gerahalli, Magadi taluk ;

(*b*) who are all the applicants for grant of lands in that gomal ;

(*c*) what are the impediments or bottlenecks to grant the land to the landless Irruligas, Harijans and other landless of that village ?

A.— **Sri M. V. KRISHNAPPA** (Minister for Revenue).—

A. G.

(*a*) 164-30.

(*b*) *Vide* list given below.

(*c*) The matter is being examined.